# ಓದು ಬರಹದ ಮೂಲ ಬೇರು

ಮುನಿರುದ್ರಪ್ಪ (ರುದ್ರೇಶ್ ನಾಗಸಂದ್ರ)
ಧಾರಾವಾಹಿ ಕಥೆಗಾರ



**◆ ನಿಮ್ಮಲ್ಲಿ ಒಬ್ಬ ಕಥೆಗಾರ ಇದ್ದಾನೆ ಎನ್ನುವುದು ಗೊತ್ತಾಗಿದ್ದು, ಅದನ್ನು ದುಡಿಮೆಗೆ ಹಚ್ಚಿದ್ದು ಹೇಗೆ?**

ನಾನು ನಟ ಆಗುವ ಕನಸಿನಲ್ಲಿ ತರಬೇತಿಗೆಂದು ‘ಆದರ್ಶ’ ಎಂಬ ಸಿನಿಮಾ ಸಂಸ್ಥೆಗೆ ಸೇರಿದೆ. ಅಲ್ಲಿ ಅಮರಮಲ್ಲ ಎನ್ನುವ ಅಧ್ಯಾಪಕರು ಇದ್ದರು. ಅವರು ನಟ ರಜನಿಕಾಂತ್ ಸ್ನೇಹಿತರು. ಒಮ್ಮೆ ರಜನಿಕಾಂತ್ ಪರಿಚಯವಾಯಿತು. ನಾನು ಬರೆದಿದ್ದ ಕೆಲವೊಂದು ಕಥೆಗಳನ್ನು ಅವರಿಗೆ ತೋರಿಸಿದೆ. ಆಗ ನಮ್ಮ ಅಧ್ಯಾಪಕರು ಬರವಣಿಗೆಯಲ್ಲಿ ತೊಡಗುವ ಸಲಹೆ ನೀಡಿದರು. ನಟಿಸಲು ಅವಕಾಶ ಸಿಕ್ಕರೆ ಸರಿ ಇಲ್ಲದಿದ್ದರೆ ಬೇಡ. ಬರಹಕ್ಕೆ ಮೊದಲ ಆದ್ಯತೆ ಎಂದಿದ್ದರಿಂದ ಬರವಣಿಗೆ ಆರಂಭಿಸಿದೆ. ನಿರ್ದೇಶಕ ಏಸುದಾಸ್ ‘ಬೆಂಗಳೂರು ಟುಡೇ’ ಎನ್ನುವ ಸಿನಿಮಾದಲ್ಲಿ ಅವಕಾಶ ನೀಡಿದರು. ಅದು ಬಿಡುಗಡೆ ಆಗಲಿಲ್ಲ.

‘ನನ್ನಾಸೆಯ ಹೂವೆ’, ‘ಪಾಪಿಗಳ ಲೋಕದಲ್ಲಿ’ ‘ರಂಗಾದ ಹುಡುಗರು’ ಸಿನಿಮಾಕ್ಕೂ ಸಂಭಾಷಣೆ ಬರೆದೆ. ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. ಕೆಲವು ಸಿನಿಮಾಗಳಿಗೆ ಹಾಡುಗಳನ್ನೂ ಬರೆದೆ. ಅದಾದ ಮೇಲೆ ಸಿಹಿಕಹಿ ಚಂದ್ರು ಪರಿಚಯ ಆಯಿತು. ಅವರ ‘ಪಾರ್ವತಿ ಪರಮೇಶ್ವರ’ದಲ್ಲಿ ಕೆಲಸ ಮಾಡಿದೆ. ‘ಪತಿ ಪತ್ನಿ ಗುಲಾಮ’, ‘ಪಾಂಡುರಂಗ ವಿಠಲ’ ಮಾಡಿದೆ. ‘ಪಾರ್ವತಿ ಪರಮೇಶ್ವರ’ ದಿನಕ್ಕೊಂದು ಕಥೆಯಂತೆ ಸುಮಾರು 1700 ಕಥೆಗಳನ್ನು ಮಾಡಿದ್ದೇವೆ. ಎರಡನೇ ಬಾರಿಗೆ ‘ಪಾಪ ಪಾಂಡು’, ‘ಸಿಲ್ಲಿ ಲಲ್ಲಿ’, ಆರಂಭಿಸಿದರು, ಅದಕ್ಕೂ ಕಥೆಗಳನ್ನು ಮಾಡಿದೆ. ಇದರ ಜೊತೆ ಕೆಲವೊಂದು ಸಾಕ್ಷ್ಯಚಿತ್ರ–ಕಿರುಚಿತ್ರಗಳನ್ನು ಮಾಡುತ್ತಿದ್ದೇನೆ.

**◆ ದಿನಕ್ಕೊಂದು ಹೊಸ ಕಥೆಯನ್ನು ರೂಪಿಸಲು ಹೇಗೆ ಸಾಧ್ಯ ಆಗ್ತಾ ಇತ್ತು?**

ಅದು ಒಂದು ಸಾಲಿನ ಎಳೆ ಅಥವಾ ಘಟನೆಯನ್ನು ಇಟ್ಟುಕೊಂಡು ಅದರ ಸುತ್ತ ದೃಶ್ಯಗಳನ್ನು ಹೆಣೆಯುವ ಕೆಲಸ. ಸನ್ನಿವೇಶವನ್ನು ಹಾಸ್ಯದ ಧಾಟಿಯಲ್ಲಿ ಹೇಗೆ ದಾಟಿಸುವುದು ಎಂದು ಯೋಚಿಸುತ್ತೇವೆ. ಹಾಸ್ಯದ ಮೂಲಕವೂ ಮುಖ್ಯ ಸಂಗತಿ ಹೇಳಬಹುದು ಎನ್ನುವುದು ಉದ್ದೇಶ. ಈ ಸೀರಿಯಲ್‌ಗಳನ್ನು ಮಕ್ಕಳು ನೋಡುತ್ತಿದ್ದರು. ಪೋಷಕರೂ ಇಂತಹದನ್ನು ನೋಡಲು ಪ್ರೋತ್ಸಾಹಿಸುತ್ತಿದ್ದರು. ಹಾಗಾಗಿ ತುಂಬ ಜವಾಬ್ದಾರಿಯಿಂದಲೇ ಕಥೆ ಮತ್ತು ಸಂಭಾಷಣೆಯನ್ನು ರೂಪಿಸುತ್ತಿದ್ದೆವು.

**◆ ಟೀವಿ ಕಥೆಗಳಲ್ಲಿ ಏಕೆ ಏಕರೂಪತೆ ಹೆಚ್ಚಿರುತ್ತದೆ?**

ಸಾಮಾನ್ಯವಾಗಿ ಟೀವಿ ಕಥೆ ಮನೆಯೊಳಗಿನ ನಾಟಕದಂತೆ ಇರುತ್ತದೆ. ನಿತ್ಯವೂ ಚಿತ್ರೀಕರಣ ಇರುವುದರಿಂದ ಬೇರೆ ಸ್ಥಳಗಳಿಗೆ ಹೆಚ್ಚು ಹೋಗುವುದಿಲ್ಲ. ಒಮ್ಮೊಮ್ಮೆ ಹೊರಗಡೆಯ ದೃಶ್ಯಗಳಿದ್ದರೂ ಮನೆಯಲ್ಲೇ ನಡೆಯುವ ಘಟನೆಯಂತೆಯೇ ಬರುತ್ತವೆ. ಜನಪ್ರಿಯ ಧಾರಾವಾಹಿಗಳು ಕುಟುಂಬಗಳಲ್ಲಿ ಸಾಮಾನ್ಯವಾಗಿ ನಡೆಯುವ ಘಟನೆಗಳನ್ನೇ ಕೇಂದ್ರೀಕರಿಸಿ ಕಥೆ ಹೇಳುತ್ತವೆ. ಕೆಲವೊಮ್ಮೆ ಹೇಳಿದ್ದನ್ನೇ ಹೇಳಿ ಏಕತಾನತೆ ಅನಿಸಬಹುದು. ಅದರಲ್ಲೂ ವಿಭಿನ್ನತೆಯನ್ನು ತರಬಹುದು. ಹೊಸ ವಿಷಯಗಳನ್ನು ಚುರುಕಾಗಿ ಹೆಣೆಯುತ್ತಾ ಹೋದರೆ ಹೀಗಾಗುವುದಿಲ್ಲ.

**◆ ಚಿತ್ರಕಥೆ ಬರೆಯುವ ಆಸಕ್ತನೊಬ್ಬ ಯಾವ ರೀತಿ ಸಿದ್ಧತೆ ಮಾಡಿಕೊಳ್ಳಬೇಕು?**

ಬರಹಗಾರ ಯಾವತ್ತೂ ಒಳ್ಳೆಯ ಓದುಗ ಆಗಿರಬೇಕು. ವಿಷಯವನ್ನು ತಿಳಿದುಕೊಳ್ಳಬೇಕು ಎನ್ನುವ ಆಸಕ್ತಿ ಅವನಿಗೆ ಇರಬೇಕು. ಸಿನಿಮಾ ನೋಡುವ ಕುತೂಹಲ ಇರಬೇಕು. ಆಗ ಬರಹಗಾರನಿಗೆ ಕಂಡಿದ್ದು, ಅನುಭವಿಸಿದ್ದನ್ನು ದಾಖಲಿಸುವ ತವಕ ಹುಟ್ಟುತ್ತದೆ. ಅವನಲ್ಲಿ ಸಹಜವಾಗಿ ಒಬ್ಬ ಬರಹಗಾರನೂ ಹುಟ್ಟುತ್ತಾನೆ. ಬರಹಗಾರ ಆಗಬೇಕು ಎಂದುಕೊಂಡು ಹುಟ್ಟುವುದಿಲ್ಲ. ನಿರ್ದೇಶಕನಿಗೆ ಕೆಲಸ ಕಲಿಯುವ ಆಸಕ್ತಿಯಂತೆ ಬರಹಗಾರನಿಗೂ ಇರಬೇಕು.

ಬರೆಯುವ ಆಸಕ್ತಿ ಇದ್ದಾಗ ನಮ್ಮ ಒಲವನ್ನು ನಿರ್ದಿಷ್ಟ ಮಾಡಿಕೊಳ್ಳಬೇಕು. ನಮ್ಮ ಇಷ್ಟವಾದ ಲೇಖಕರು, ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಏನಾದರೂ ಮಾಡಬೇಕು ಎನ್ನುವ ತುಡಿತ ಯಾರನ್ನಾದರೂ ಭೇಟಿ ಮಾಡುವ ಸಂದರ್ಭವನ್ನು ಮಾಡಿಕೊಡುತ್ತದೆ.

ಹಳ್ಳಿಯವರಿಗೆ ತುಂಬ ಕಷ್ಟ. ನಾನು ಬೆಂಗಳೂರಿಗೆ ಸಮೀಪ ಇರುವುದರಿಂದ ಅನುಕೂಲ ಹೆಚ್ಚಿತ್ತು. ದೂರದ ಊರಿನಲ್ಲಿ ಇದ್ದವರು ಊರು ಬಿಟ್ಟು ಬರಬೇಕು. ಈಗ ಸಾಮಾಜಿಕ ಮಾಧ್ಯಮಗಳ ಬಳಕೆ ಹೆಚ್ಚಿದೆ. ಅದರ ಮೂಲಕ ಸಂಪರ್ಕಿಸಿ ನಮ್ಮ ಕೆಲಸವನ್ನು ತಿಳಿಸಬಹುದು. ನಮ್ಮ ಕೌಶಲ್ಯವನ್ನು ವ್ಯಕ್ತಪಡಿಸಲು ಹಲವು ವೇದಿಕೆಗಳು ಈಗಿವೆ. ಟೀವಿ ರಿಯಾಲಿಟಿ ಶೋಗಳಲ್ಲಿಯೂ ಅವಕಾಶಗಳು ಸಿಗುತ್ತವೆ. ಅವನ್ನು ಹುಡುಕುವ ಪ್ರಯತ್ನ ಮಾಡಬೇಕು. ಅವಕಾಶ ಸಾಕಷ್ಟು ಇವೆ. ಈ ಕ್ಷೇತ್ರಕ್ಕೆ ಹಿನ್ನೆಲೆ ಅಂಕಪಟ್ಟಿ ಬೇಕಿಲ್ಲ. ಪ್ರತಿಭೆ ಇದ್ದರೆ ತಕ್ಷಣ ಅವಕಾಶ ಸಿಗುತ್ತದೆ.

**◆ ಬಹುತೇಕ ಧಾರಾವಾಹಿಗಳಲ್ಲಿ ಮದುವೆ, ದಾಂಪತ್ಯದ ಒಡಕು, ಹೊರ ಸಂಬಂಧ ಬರುವುದು ಏಕೆ?**

ಜನರು ಯಾವ ಕಡೆ ಹೆಚ್ಚಿನ ಆಸಕ್ತಿ ವಹಿಸುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ಕಥೆ ಬೆಳೆಯುತ್ತದೆ. ಇದಕ್ಕೆ ಸಂಬಂಧಿಸಿದಂತೆ ಟೀವಿಯಿಂದಲೂ ಮಾಹಿತಿ ಬರುತ್ತದೆ. ಅನ್ಯ ಸಂಬಂಧ ತಪ್ಪು ಎನ್ನುವುದನ್ನೇ ಕಥೆ ಹೇಳುತ್ತದೆ. ಉದಾಹರಣೆಗೆ ‘ಪಾಂಡುರಂಗವಿಠಲ’ದಲ್ಲಿ ಹೆಂಡತಿಯ ಪ್ರೀತಿ ಪಡೆಯಲು ಅನ್ಯ ಹೆಣ್ಣಿನ ಬಗ್ಗೆ ಆಸಕ್ತಿಯನ್ನು ಸುಮ್ಮನೆ ತೋರಿಸುತ್ತಾನೆ.

■ ರಾಘವೇಂದ್ರ ಕೆ.